ಸಮಾಜದ ಸಂವೇದನೆಯ ಧ್ವನಿಯಾಗಿ ಪೋಸ್ಟ್ ಬಾಕ್ಸ್ ನಂ–9 ನಾಟಕ

ಸತೀಶ ಆರ್.*

DOI: https://doi.org/10.5281/zenodo.24338807

ABSTRACT

ನಮ್ಮ ನಡುವಿರುವ ಸೂಕ್ಷ್ಮ ಸಂವೇದನಾಶೀಲ ಬರಹಗಾರರಲ್ಲಿ 'ಲಕ್ಷ್ಮಿಪತಿ ಕೋಲಾರ' ಅವರೂ ಸಹ ಒಬ್ಬರಾಗಿದ್ದಾರೆ. ಅವರು ಬರೆದ ಈ ಪೋಸ್ಟ್ ಬಾಕ್ಸ್ ನಂಬರ್–9 ನಾಟಕವು, ತಮ್ಮ ನೆಲದಲ್ಲಿದ್ದು ಅನ್ಯರಂತೆ ಪರಕೀಯ ಪ್ರಜ್ಞೆಯಿಂದ ಜೀವಿಸುತ್ತಿರುವ ಒಂದು ಜನಾಂಗದ ಚಿತ್ರಣವನ್ನು ಅನಾವರಣಗೊಳಿಸುತ್ತದೆ. ಜಗತ್ತಿನ ಪ್ರಮುಖ ಧರ್ಮಗಳ ಉಗಮಕ್ಕೆ ಕಾರಣವಾದ ಮಧ್ಯಪ್ರಾಚ್ಯವು ಶಾಂತಿ, ಸೌಹಾರ್ದತೆಯ ನೆಲೆಯಾಗಿರದೆ, ಸದಾ ಸಂಘರ್ಷದ ಜೀವಂತ ಗೂಡಾಗಿದೆ. ಈ ನಾಟಕದಲ್ಲಿ ಅತಿಯಾದ ಜನಾಂಗೀಯ ಧೋರಣೆಯಿಂದ ನಡೆಯುತ್ತಿರುವ ದಬ್ಬಾಳಿಕೆ, ದೌರ್ಜನ್ಯ ಹಾಗೂ ಅಲ್ಲಿನ ಜನರ ನೋವುಗಳನ್ನು ಲೇಖಕರು ರೂಪಕಗಳನ್ನು ಬಳಸಿಕೊಂಡು ವಿಭಿನ್ನ ನಿರೂಪಣಾ ಶೈಲಿಯ ಮೂಲಕ ಕಟ್ಟಿಕೊಟ್ಟಿದ್ದಾರೆ. ಈ ನಾಟಕದಲ್ಲಿ ಬರುವ 'ಕೈಫಾ ಆಫೀಫೀ' ಎಂಬ ಹೆಣ್ಣು ಮಗಳು ದೌರ್ಜನ್ಯಕ್ಕೊಳಗಾದ ಅವರ ಇಡೀ ಜನಾಂಗದ ಪ್ರತಿನಿಧಿಯಂತೆ ಇಲ್ಲಿ ನಮಗೆ ಕಾಣುತ್ತಾಳೆ.

KEYWORDS: ಲಕ್ಷ್ಮಿಪತಿ ಕೋಲಾರ, ಪೋಸ್ಟ್ ಬಾಕ್ಸ್ ನಂಬರ್–9, ಸಂವೇದನೆ, ಕಾವ್ಯಪ್ರತೀಕ, ದೃಶ್ಯರೂಪಕ, ಕೈಫಾ ಆಫೀಫೀ, ಗುಡ್ಡ ಮಾದಯ್ಯ.

* **ಸತೀಶ ಆರ್.**, ಸಂಶೋಧನಾರ್ಥಿ, ಕನ್ನಡ ವಿಭಾಗ, ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

ಸಾವಿರಾರು ವರ್ಷಗಳ ಇತಿಹಾಸವನ್ನು ಗಮನಿಸಿದಾಗ ಬಲಾಢ್ಯರು ಬಲಹೀನರ ಮೇಲೆ, ಪ್ರಬಲ ಧರ್ಮ–ಸಂಸ್ಕೃತಿಗಳು ಇತರ ದುರ್ಬಲ ಧರ್ಮ–ಸಂಸ್ಕೃತಿಗಳ ಮೇಲೆ ಆಧಿಪತ್ಯ ಸಾಧಿಸುತ್ತಾ ತಮ್ಮ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳುತ್ತಾ ಬಂದಿರುವುದನ್ನು ನಾವು ನೋಡಬಹುದಾಗಿದೆ. ಜಗತ್ತಿನ ಎಲ್ಲಾ ಧರ್ಮಗಳು ಹುಟ್ಟಿರುವುದು ಪ್ರೀತಿ, ಕರುಣೆ, ಶಾಂತಿ, ಮಾನವೀಯತೆ, ಸತ್ಯ ಮುಂತಾದ ತತ್ವಗಳ ನೆಲೆಯಲ್ಲಿ. ಯಾವ ಧರ್ಮವೂ ದ್ವೇಷವನ್ನು ಬೋಧಿಸುವುದಿಲ್ಲ, ಯಾವ ಧರ್ಮವೂ ಮತ್ತೊಬ್ಬರನ್ನು ಹಿಂಸಿಸುವಂತೆ ಹೇಳುವುದಿಲ್ಲ. ಎಲ್ಲಾ ಧರ್ಮಗಳು ಮನುಷ್ಯನನ್ನು ಉತ್ತಮ ವ್ಯಕ್ತಿತ್ವ ರೂಪಿಸುವಲ್ಲಿ ಮತ್ತು ಸಮಾಜದಲ್ಲಿ ಐಕ್ಯತೆ ಕಾಪಾಡಲು ಸಹಾಯ ಮಾಡುತ್ತವೆ. ಇದರ ಮೂಲ ಸಾರವನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಮನುಷ್ಯರಾದ ನಾವುಗಳು ಎಲ್ಲಾ ಕಾಲಗಳಲ್ಲೂ ಸೋಲುತ್ತಿದ್ದೇವೆ.

ಜಗತ್ತಿನಲ್ಲಿನ ದೇಶಗಳು ಧರ್ಮ, ಭಾಷೆ, ಆಡಳಿತದ ಅನುಕೂಲಕ್ಕಾಗಿ ಹಾಗೂ ಮನುಷ್ಯನ ಸ್ವಾರ್ಥಕ್ಕಾಗಿ ಹಾಕಿಕೊಂಡ ಗಡಿರೇಖೆಗಳಷ್ಟೇ. ಎಲ್ಲಾ ಕಾಲದಲ್ಲಿ ಸಾಹಿತ್ಯವು ಜಗತ್ತಿನ ಸಮಕಾಲೀನ ಸಮಸ್ಯೆಗಳ, ಸಮಾಜದ ನೋವುಗಳ ಅಭಿವ್ಯಕ್ತಿ ಮಾಧ್ಯಮವಾಗಬೇಕು ಹಾಗೂ ಸಮಾಜದ ತಲ್ಲಣಗಳ, ಸಂವೇದನೆಗಳ ಧ್ವನಿಯಾಗಬೇಕು. 'ಖಡ್ಗಕ್ಕಿಂತ ಲೇಖನಿ ಹರಿತ' ಎಂಬ ಮಾತಿನಂತೆ ಖಡ್ಗವು ಮನುಷ್ಯನಲ್ಲಿ ಸ್ವಲ್ಪ ಕಾಲ ಭಯವನ್ನು ಉಂಟುಮಾಡಬಹುದು. ಆದರೆ ಲೇಖನಿಯು ಸಮಾಜದಲ್ಲಿ ವರ್ಗರಹಿತ, ಜಾತಿರಹಿತ, ಶೋಷಣೆರಹಿತ ಸಮಸಮಾಜವನ್ನು ನಿರ್ಮಾಣ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ಮೂಲಕ ಸಾಹಿತ್ಯವು ಸಮಾಜವನ್ನು ಕಟ್ಟುವ, ಕೂಡಿಸುವ ಜನರಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಮೂಡಿಸುವ ಕಾರ್ಯ ಮಾಡಬೇಕು.

ಈ ನಿಟ್ಟಿನಲ್ಲಿ 'ಲಕ್ಷ್ಮಿಪತಿ ಕೋಲಾರ' ಅವರು ನಮ್ಮ ನಡುವಿರುವ ಸೂಕ್ಷ್ಮ ಸಂವೇದನಾಶೀಲ ಬರಹಗಾರರಲ್ಲಿ ಒಬ್ಬರಾಗಿದ್ದು ಪ್ರಶಸ್ತಿ–ಪುರಸ್ಕಾರಗಳ ಬೆನ್ನು ಬೀಳದೆ ಸದಾ ಸಮಾಜದ ಎಚ್ಚರಕ್ಕಾಗಿಯೇ ದುಡಿಯುತ್ತಿದ್ದಾರೆ. ಹಲವು ಶತಮಾನಗಳಿಂದ ಸಮಾಜದಲ್ಲಿ ಅಂಚಿಗೆ ಸರಿಸಲ್ಪಟ್ಟ ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಅವಕಾಶವಂಚಿತ ಶೋಷಿತರ ಧ್ವನಿಯನ್ನು ಸಮಾಜದ ಮುಖ್ಯವಾಹಿನಿಗೆ ಮುಟ್ಟಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಾ ಬಂದಿದ್ದಾರೆ. ಈ ಹಿನ್ನೆಲೆಯಲ್ಲಿ ಲಕ್ಷ್ಮೀಪತಿ ಕೋಲಾರ ಅವರು ರಚಿಸಿರುವ ನಾಟಕ 'ಪೋಸ್ಟ್ ಬಾಕ್ಸ್ ನಂಬರ್–9'. ಯಾವುದೇ ಒಂದು ನಾಟಕ ಯಶಸ್ವಿಗೊಳ್ಳುವುದು ಅದು ರಂಗದ ಮೇಲೆ ಕಂಡ ಪ್ರಯೋಗಗಳ ಸಂಖ್ಯೆಯಿಂದ ಮಾತ್ರವಲ್ಲ. ಆ ನಾಟಕ ಒಳಗೊಂಡಿರುವ ಹೊಸತನದಿಂದ ಎಂತಲೇ ಹೇಳಬಹುದು. ನಾಟಕದ ಕಾವ್ಯ ಪ್ರತೀಕಗಳು, ದೃಶ್ಯರೂಪಕಗಳು, ನಿರೂಪಣಾ ಶೈಲಿ ಇವೆಲ್ಲವೂ ನಾಟಕದ ತೂಕವನ್ನು ಹೆಚ್ಚಿಸುತ್ತವೆ. ನಾಟಕಕಾರ ತಾನು ಹೇಳಬೇಕಾದ ಸಂಗತಿಗಳನ್ನು ರೂಪಕಗಳಲ್ಲಿ ಹೇಳತೊಡಗಿದಾಗ ಆ ನಾಟಕ ತನ್ನ ಕಾಲ ಮತ್ತು ಸ್ಥಳಗಳ ಮಿತಿಗಳನ್ನು ದಾಟಿಬಿಡುತ್ತದೆ. ಅಂತಹ, ವಿಭಿನ್ನ ನಿರೂಪಣಾ ಶೈಲಿಯ ಮೂಲಕ ಕಾಲ ಸ್ಥಳಗಳನ್ನು

ಮುರಿಯುವ ನಾಟಕ ಇದಾಗಿದೆ.

ಹಲವು ಧರ್ಮಗಳ ಉಗಮಕ್ಕೆ ಕಾರಣವಾಗಿದ್ದ ಮಧ್ಯಪ್ರಾಚ್ಯವು (Middle East) ಶಾಂತಿ, ಸೌಹಾರ್ದತೆಯ ನೆಲೆಯಾಗಬೇಕಿತ್ತು. ಆದರೆ ಇಲ್ಲಿ ನಡೆಯುತ್ತಿರುವುದೆಲ್ಲ ತದ್ವಿರುದ್ಧ. ಕೆಲವರ ಹಿತಾಸಕ್ತಿಗಳಿಗಾಗಿ ಪ್ರತಿನಿತ್ಯ ನಡೆಯುವ ಅಮಾಯಕರ, ವೃದ್ಧರ, ಮಕ್ಕಳ ಸಾವು ನೋವುಗಳು; ಅಮಾಯಕ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯಗಳು ನಿಜವಾಗಿಯೂ ಮನುಷ್ಯ ಸಂಕುಲ ತಲೆತಗ್ಗಿಸುವಂತಹ ವಿಚಾರ. 20ನೇ ಶತಮಾನದ ಸರ್ವಾಧಿಕಾರಿ ಹಿಟ್ಲರ್ ಅತಿಯಾದ ಜನಾಂಗೀಯ ಶ್ರೇಷ್ಠತೆಯಿಂದ ಇತರ ಧರ್ಮಗಳ ಬಗ್ಗೆ ದ್ವೇಷದ ಭಾವನೆ ಜರ್ಮನ್ನರಲ್ಲಿ ಮೂಡುವಂತೆ ಮಾಡಿದನು. ಇದರ ಪರಿಣಾಮವಾಗಿ, ಎರಡನೇ ಮಹಾಯುದ್ಧದಲ್ಲಿ ಕೋಟ್ಯಂತರ ಜನರ ಸಾವು ನೋವುಗಳಿಗೆ ಕಾರಣನಾದನು. ಯುದ್ಧವೇ ಎಲ್ಲಾ ಸಮಸ್ಯೆಗಳಿಗೂ ಮೂಲ ಪರಿಹಾರವಲ್ಲ. ಸೌಹಾರ್ದತೆಯಿಂದ ಶಾಂತಿಯುತ ಮಾರ್ಗದಲ್ಲಿ, ಮಾತುಕತೆಗಳ ಮೂಲಕ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದು ಉತ್ತಮ ಮಾರ್ಗ.

ಈ ನಾಟಕದ ಮುಖ್ಯ ಪಾತ್ರ 'ಕೈಫಾ ಅಫೀಫೀ' ಎಂಬ ಹೆಣ್ಣುಮಗಳು. ಈ ನಾಟಕದ ದುರಂತ ಪಾತ್ರವೂ ಹೌದು. ಈ ನಾಟಕದಲ್ಲಿ ಲಕ್ಷ್ಮೀಪತಿಯವರು ಜಾನಪದ ತಂತ್ರವನ್ನು ನಿರೂಪಣಾ ಶೈಲಿಯಾಗಿ ಇಲ್ಲಿ ಬಳಸಿಕೊಂಡಿದ್ದಾರೆ. ಇಲ್ಲಿ ಮಲೆ ಮಹದೇಶ್ವರನ 'ಗುಡ್ಡ ಮಾದಯ್ಯನ' ಪಾತ್ರವೂ ಬರುತ್ತದೆ. ಮಾದಯ್ಯನ ಪಾತ್ರದಾರಿಯ ಮೂಲಕ ಚಾಮರಾಜನಗರದ ಪ್ರಾದೇಶಿಕ ಗ್ರಾಮ್ಯ ಕನ್ನಡದ ಮೂಲಕ ನಾಟಕದ ವಾಸ್ತವ ಚಿತ್ರಣ ಅಭಿವ್ಯಕ್ತಿಗೊಂಡಿದೆ. ಆ ಮಾದಯ್ಯನು ಇಸ್ರೇಲ್‌ನಲ್ಲಿ ನಡೆಯುತ್ತಿರೋ 'ಭಾರತ ಉತ್ಸವ'ದಲ್ಲಿ ಕಂಸಾಳೆ ಕಲೆ ಪ್ರದರ್ಶನಕ್ಕಾಗಿ ಹೋಗಿದ್ದನು. ಕಾರ್ಯಕ್ರಮಕ್ಕೆ ಇನ್ನೂ ಸಮಯ ಇದ್ದುದರಿಂದ, ಆತ ಇಸ್ರೇಲನ್ನು ಸುತ್ತಾಡಿ ಬರಲು ಹೊರಟನು. ಆಗ, ಇಸ್ರೇಲ್ ಮಿಲಿಷಿಯಾದವರು (ಮಿಲಿಟರಿ ಕಾವಲುಗಾರರು) ಈತ ಪ್ಯಾಲೆಸ್ತೀನ್ ಗೂಢಾಚಾರನಿರಬಹುದೆಂದು ಗುಡ್ಡ ಮಾದಯ್ಯನನ್ನು ವೆಸ್ಟ್ ಬ್ಯಾಂಕ್ ಗೋಡೆಯ ಆಚೆಗೆ ಎಸೆಯುತ್ತಾರೆ. ಅವನ ಜೊತೆಗೆ ಅಲ್ಲಿನ ಗೋಡೆಯಿಂದ ನಾಲ್ಕು ಗೋಡೆ ಪಾತ್ರಧಾರಿಗಳು ಬಂದು ಮಾದಯ್ಯನಿಗೆ ಮೇಳವಾಗಿ ಸೇರಿಕೊಳ್ಳುತ್ತಾರೆ. ಇವರ ನಡುವೆ ನಡೆಯುವ ಜಾನಪದ ಶೈಲಿಯ ಸಂಭಾಷಣೆ ಪ್ಯಾಲೆಸ್ತೀನ್ ಜನಸಾಮಾನ್ಯರ ನರಕ ಸದೃಶ ದರ್ಶನ ಮಾಡಿಸುತ್ತದೆ.

ದೇಶಕ್ಕೆ ದೇಶ ಜೈಲಯ್ಯ
ಬದುಕೇ ಇಲ್ಲಿ ಬಯಲಯ್ಯ
ಪ್ರತಿದಿನ ಜೀವ ಕೊಯ್ಲಯ್ಯಾ
ನಿಲ್ಲದ ಹೆಣ್ಣಿನ ಹುಯ್ಲಯ್ಯಾ
ಲೋಕದ ಕುರುಡೀಗೆ ದೊಂದೀಯ ಹಿಡಿದರೆ
ನ್ಯಾಯದ ಕೈಗೆ ಸಂಕೋಲೆ ಸರಿಯಾ?

(ಪೋಸ್ಟ್ ಬಾಕ್ಸ್ ನಂ–9, ಪುಟ ಸಂ.–08)

ಮನೆಮನೆಯು ಮಸಣ
ಸೂತಕವು ಅನುದಿನ
ಸಾವೆಮಗೆ ಉದಯ
ಇರುಳೆಲ್ಲ ನರಕ ಭಯ

(ಪೋಸ್ಟ್ ಬಾಕ್ಸ್ ನಂ –9, ಪುಟ ಸಂ. –21)

ಹೀಗೆ ನಾಟಕದಲ್ಲಿ ಅಲ್ಲಲ್ಲಿ ಹಾಡುಗಳ ಮೂಲಕ ವಾಸ್ತವ ಸ್ಥಿತಿಯನ್ನು ತೆರೆದಿಡುತ್ತಾ ನಾಟಕ ಸಾಗುತ್ತದೆ. ತಮ್ಮ ನೆಲದಲ್ಲಿದ್ದೂ ಪರಕೀಯ ಪ್ರಜ್ಞೆಯಿಂದ ಜೀವಿಸುತ್ತಿರುವ ಪ್ಯಾಲೆಸ್ತೀನ್ ಜನರ ಸ್ಥಿತಿಯನ್ನು ತಿಳಿಸಲು ಮಾದಯ್ಯನು ರೂಪಕವಾಗಿ ಬಿಳಿಗಿರಿರಂಗನ ಬೆಟ್ಟದ ಗುಡಿಯಲ್ಲಿ ಕುಳಿತಿರುವ ಶಿವನನ್ನು ದಾಸನೊಬ್ಬನು ಒಕ್ಕಲೆಬ್ಬಿಸಿದ ಕಥೆಯನ್ನು ಹಾಡಿನ ಮೂಲಕ ಅಭಿವ್ಯಕ್ತಿಪಡಿಸುತ್ತಾನೆ. ಬೆಟ್ಟ ಹತ್ತಿ ಬಂದ ದಾಸಯ್ಯನಿಗೆ ಬಿಸಿಲು ತಡೆಯಲಾರದೆ ಅಲ್ಲಿಯೇ, ಗುಡಿ ಒಳಗೆ ಕುಳಿತ ಶಿವನನ್ನು ಕಂಡು ನನಗೂ ಒಂದಿಷ್ಟು ಜಾಗ ಕೊಡು ಎಂದು ಕೇಳುತ್ತಾನೆ. ಆಗ ಶಿವ ದಾಸಯ್ಯನನ್ನು ಒಳಗೆ ಕರೆಯುತ್ತಾನೆ. ಹಾಗೆಯೇ ಶಂಖ, ಜಾಗಟೆ, ಬವನಾಸಿಗಳು ಇಡುತ್ತಾ ಜಾಗವೆಲ್ಲಾ ತುಂಬಿದಾಗ, ಶಿವನನ್ನು ಸ್ವಲ್ಪ ಹೊತ್ತು ಹೊರಗೆ ನಿಲ್ಲಲು ಹೇಳುತ್ತಾನೆ. ಅನಂತರ, ಬಹಳಷ್ಟು ಸಮಯದ ನಂತರ ಶಿವನು ದಾಸಯ್ಯ ಹೊರಗೆ ಬಾರಯ್ಯ ಎಂದು ಕರೆದಾಗ 'ನಾನು ದಾಸಯ್ಯ ಅಲ್ಲ ರಂಗಯ್ಯ' ಸ್ವಲ್ಪ ಗೌರವದಿಂದ ಮಾತಾಡು ಎಂದು ಉತ್ತರ ಕೊಡುತ್ತಾನೆ. ಆಯ್ತು ರಂಗಯ್ಯನವರೇ, ನನಗೆ ಜಾಗ ಇಲ್ಲವಲ್ಲ ನಾನೆಲ್ಲಿ ಹೋಗಲಿ ಎಂದು ಶಿವ ಕೇಳಿದಾಗ, ಅದಕ್ಕೆ ಉತ್ತರಿಸಿದ ದಾಸಯ್ಯ ಇಲ್ಲಿಂದ ಮೂರು ಮೈಲಿ ದೂರದಲ್ಲಿ ಪಾಳು ಬಿದ್ದ ಒಂದು ಗುಡಿಯಿದೆ; ಬೇಕಾದರೆ ಅದನ್ನು ರಿಪೇರಿ ಮಾಡಿಸಿಕೊಂಡು ಅಲ್ಲಿ ಇರು ಎನ್ನುತ್ತಾನೆ. ಹೀಗೆ ದಾಸಯ್ಯನು ಶಿವನ ಗುಡಿಗೆ ಬಂದು ಶಿವನನ್ನು ಒಕ್ಕಲೆಬ್ಬಿಸಿ ರಂಗಯ್ಯನಾಗುವ ಪ್ರಸಂಗವನ್ನು ಪ್ಯಾಲೆಸ್ತೀನ್‌ನ ಮೂಲ ನಿವಾಸಿಗಳನ್ನು ಒಕ್ಕಲೆಬ್ಬಿಸಿ ಅವರನ್ನು ಅನ್ಯರನ್ನಾಗಿಸುವುದಕ್ಕೆ ರೂಪಕವಾಗಿ ಲೇಖಕರು ನಾಟಕದಲ್ಲಿ ಕಟ್ಟಿಕೊಟ್ಟಿದ್ದಾರೆ.

ಈ ಮುಖ್ಯ ಪಾತ್ರವಾದ ಚಿಕ್ಕ ವಯಸ್ಸಿನ ಹುಡುಗಿ 'ಕೈಫಾ ಅಫೀಫೀ'. ಕೈಫಾ ಅಫೀಫೀಯು ಆಲಿವ್ ತೋಟದಲ್ಲಿ 'ಜಿನ್ ಪಿಶಾಚಿ'ಯನ್ನು ಎದುರಾಗುವ ಪ್ರಸಂಗವಿದೆ. ಪಿಶಾಚಿಯ ಬಳಿ ಆಕೆಯ ಮನೆಯ ಬೀಗದ ಕೈ ಇದೆ. ಆದರೆ ಮನೆಯೇ ಇಲ್ಲ. ಅದು ಇಸ್ರೇಲ್ ಮಿಲಿಷಿಯಾದವರಿಂದ ನಾಶವಾಗಿದೆ. ಬೀಗದ ಕೈ ಹಿಡಿದುಕೊಂಡು ಇಲ್ಲದಿರುವ ತನ್ನ ಮನೆಯನ್ನು ಪಿಶಾಚಿ ಹುಡುಕುತ್ತಿರುತ್ತದೆ. ಜಿನ್ ಪಿಶಾಚಿಯ ರೂಪ ಕಂಡು ಎಲ್ಲರೂ ಹೆದರುತ್ತಾರೆ. ಆದರೆ ಆ ಪಿಶಾಚಿ ಇಸ್ರೇಲ್ ಮಿಲಿಷಿಯಾದವರ ಹೆಸರು ಕೇಳಿದರೆ ಹೆದರಿ ಪಿಶಾಚಿಯೇ ಓಡಿ ಹೋಗುತ್ತದೆ. ಯಾಕೆಂದರೆ ಈ ಜಿನ್ ಪಿಶಾಚಿ ಇಸ್ರೇಲ್ ಮಿಲಿಷಿಯಾದವರ ಕ್ರೌರ್ಯಕ್ಕೆ ತುತ್ತಾದ ಪ್ಯಾಲೆಸ್ತೀನ್ ಹೆಂಗಸೇ ಆಗಿರುತ್ತದೆ. ಹೀಗೆ ಜೀವವಿಲ್ಲದ ಸತ್ತ ಆತ್ಮಕ್ಕೆ ಜೀವ ತುಂಬಿ ಆ

ಪಾತ್ರದ ಮೂಲಕ ಕ್ರೌರ್ಯಕ್ಕೆ ಒಳಗಾದವರ ರೂಪಕದಂತೆ ಮಾತನಾಡಿಸುವ ಲೇಖಕರ ಕಥಾ ತಂತ್ರ ವಿಶಿಷ್ಟವಾಗಿದೆ.

ಈ ನಾಟಕದಲ್ಲಿ ಹಾಡುಗಾರ ಮಾದಯ್ಯನ ನಿರೂಪಣೆಯು ಕೈಫಾ ಮನೋಲೋಕವನ್ನು ಮುಕ್ತವಾಗಿ ಬಿಚ್ಚಿಡುವ ತಂತ್ರವನ್ನು ಬಳಸಲಾಗಿದೆ. ಆಕೆಯ ಮನೆಯ ಹತ್ತಿರದಲ್ಲೇ ಒಂದು ಪೋಸ್ಟ್ ಬಾಕ್ಸ್ ಇರುತ್ತದೆ. ಆ ಪೋಸ್ಟ್ ಬಾಕ್ಸ್‌ನ ಸಂಖ್ಯೆ ಒಂಬತ್ತು ಆಗಿರುತ್ತದೆ. ಆ ಪೋಸ್ಟ್ ಬಾಕ್ಸನ್ನು ಆಕೆಯು ತನ್ನ ಆಪ್ತ ಸಂಗಾತಿಯಂತೆ ಭಾವಿಸಿರುತ್ತಾಳೆ. ಇದರ ಮೂಲಕ ಕೈಫಾ ಅಫೀಫೀಯ ಅಂಚೆ ಗೆಳೆಯರು ಆಕೆಯ ಮನೋಲೋಕದಲ್ಲೇ ಭೇಟಿಯಾಗುತ್ತಾರೆ. ಇಸ್ರೇಲಿನ ಸೈಕಿಯಾಟ್ರಿಸ್ಟ್ ಅವಿ, ಪ್ಯಾರಿಸ್‌ನ ಗೆಳತಿ ಎಮಿಲಿ, ಚೀನಾದ ಡಾಕ್ಟರ್ ಅಂಗ್ ಸ್ಟಿ ಚಾಯ್, ಲಂಡನ್‌ನ ವಿಲಿಯಂ, ಬೈರೂತಿನ ಅಜ್ಜ – ಹೀಗೆ ದೇಶ ವಿದೇಶಗಳ ಮಿತ್ರರೊಂದಿಗೆ ಅಂಚೆ ಪತ್ರಗಳ ಮೂಲಕ ಸಂವಾದ ನಡೆಸುತ್ತಾ ತನ್ನ ಅಂತರಾಳದ ನೋವುಗಳನ್ನು ಹಾಗೂ ಅಲ್ಲಿ ನಡೆಯುತ್ತಿದ್ದ ವಾಸ್ತವ ಸ್ಥಿತಿಗತಿಗಳನ್ನು ಹಂಚಿಕೊಳ್ಳುತ್ತಿರುತ್ತಾಳೆ.

ಈ ನಾಟಕವು ಅಲ್ಲಲ್ಲಿ ಕೆಲವು ಸ್ವತಂತ್ರ ನಿರೂಪಣೆಯುಳ್ಳ ದೃಶ್ಯಗಳಿಂದಲೂ ಹೆಣೆಯಲ್ಪಟ್ಟಿದೆ. ಕೈಫಾ ಅಫೀಫೀಯು ಬೆಳೆದು ದೊಡ್ಡವಳಾಗುತ್ತಿರುತ್ತಾಳೆ. ಸುಮಾರು ವರ್ಷಗಳ ಹಿಂದೆ ತನ್ನ, ಅಜ್ಜನ ಕಿತ್ತಳೆ ತೋಟವನ್ನು ಕಿತ್ತುಕೊಂಡು ಅಲ್ಲೇ 'ಹಿಬ್ರೂ ವಿಶ್ವವಿದ್ಯಾಲಯ'ವನ್ನು ಕಟ್ಟಿರುತ್ತಾರೆ. ಮುಂದೆ ಕೈಫಾ ಅಫೀಫೀ ಅದೇ ವಿಶ್ವವಿದ್ಯಾಲಯದಲ್ಲಿ 'ಮನೋವಿಜ್ಞಾನ' ವಿಷಯದಲ್ಲಿ ಕಲಿಯಲು ಅಲ್ಲಿಗೆ ಸೇರುತ್ತಾಳೆ. ಅಲ್ಲಿ ಕಿತ್ತಳೆ ಹಣ್ಣನ್ನು ಕಿತ್ತಿದ್ದಾಳೆ ಎಂಬ ಕಾರಣವನ್ನು ಇಟ್ಟುಕೊಂಡು ಅದೇ ಕಾಲೇಜಿನ ಅನ್ಯ ಕೋಮಿನ ಹುಡುಗರು ಮನಬಂದಂತೆ ಕೈಫಾಳನ್ನು ಕಲ್ಲಿನಿಂದ ಹೊಡೆದು ಚಿತ್ರಹಿಂಸೆ ನೀಡುವ ಪ್ರಸಂಗ ಮನಕಲುಕುವಂತಿದೆ. ಇಲ್ಲಿನ ವೆಸ್ಟ್ ಬ್ಯಾಂಕ್ ಗೋಡೆಯು ಪ್ಯಾಲೆಸ್ತೀನ್ ಹಾಗೂ ಇಸ್ರೇಲನ್ನು ಭೌತಿಕವಾಗಿ ಪ್ರತ್ಯೇಕಿಸುವ ಎತ್ತರವಾದ ಗೋಡೆಯದು. ಇದು ಸಮಾಜದಲ್ಲಿ ನಮ್ಮ ಸುತ್ತಮುತ್ತಲೂ ನೂರಾರು ವರ್ಷಗಳಿಂದ ಹುತ್ತದಂತೆ ಬೆಳೆದಿರುವ ಜಾತಿ, ಧರ್ಮ, ಭಾಷೆ, ದೇಶ, ಜನಾಂಗ, ಲಿಂಗ, ಪಂಥ, ಸಿದ್ಧಾಂತ ಮುಂತಾದ ಗೋಡೆಗಳು ಸಂಕೇತವಾಗಿ ಕಾಣುತ್ತದೆ. ಇಂತಹ ಭೌತಾಭೌತ ಗೋಡೆಗಳನ್ನು ನಿರಂತರವಾಗಿ ಕೆಡವಿ ಹಾಕಬೇಕಾದ ಅಗತ್ಯವನ್ನು ಇಂತಹ ಪ್ರತೀಕಗಳ ಮೂಲಕ ಈ ನಾಟಕ ಒತ್ತಿ ಹೇಳುತ್ತದೆ.

ತಾವು ಹುಟ್ಟಿ ಬೆಳೆದ ತಾಯಿ ನೆಲ ಪ್ಯಾಲೆಸ್ತೀನ್ ಮೇಲಿನ ಅತಿಕ್ರಮಣ, ದೌರ್ಜನ್ಯದ ವಿರುದ್ಧ ಎತ್ತುವ ಈ ಹೆಣ್ಣು ಮಗಳ ಪ್ರಶ್ನೆಗಳು ಇಸ್ರೇಲ್ ಮಿಲಿಷಿಯಾದವರ ಎದೆಯಲ್ಲಿ ನಡುಕ ಹುಟ್ಟಿಸುತ್ತವೆ. ತನ್ನ ಕಣ್ಣ ಮುಂದೆಯೇ ತನ್ನವರೆಲ್ಲರನ್ನೂ ಕಳೆದುಕೊಳ್ಳುತ್ತಾಳೆ. ಕೊನೆಗೆ ಹಿಬ್ರೂ ವಿಶ್ವವಿದ್ಯಾಲಯದಲ್ಲಿ 'ಯಾಸರ್ ಅರಾಫತ್'ರ ಹುತಾತ್ಮ ದಿನಾಚರಣೆಯಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ್ದಾಳೆಂಬ ಆರೋಪದ ಮೇರೆಗೆ ಬಂಧಿಸಿ ಜೈಲಿಗೆ ಹಾಕುತ್ತಾರೆ. ಕೈಫಾ ಅಫೀಫೀ ಆ ಜೈಲಿಸಿ ನರಕ ಸದೃಶವನ್ನು

ಆಕೆಯ ಮಾತುಗಳಲ್ಲಿ – ''ಜನಾಂಗವಾದಿಗಳ ಸುತ್ತಲೂ ಇರೋ ಮೌನ ಕೂಡ ಭಯಂಕರವಾಗಿರುತ್ತದೆ.....ಮೃತ್ಯುವಿನ ಹೆಜ್ಜೆ ಸಪ್ಪಳವೂ ಕೇಳಿಸುವಷ್ಟು ಜೀರೋ ಸೈಲೆನ್ಸ್! ಇದೇ ನಿಜವಾದ ನರಕ'' (ಪೋಸ್ಟ್ ಬಾಕ್ಸ್ ನಂ–9, ಪುಟ ಸಂ.–75) ಎಂಬ ಆಕೆಯ ಮಾತಿನಲ್ಲಿ ನಿಜವಾಗಿಯೂ ಆಕೆಯು ಅನುಭವಿಸಿದ ಜೈಲಿನ ಭಯಾನಕ ಸ್ಥಿತಿಯು ನಾಟಕದಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಆ ಭಾಗದ ಪ್ರಸಿದ್ಧ ಮಾನವ ಹಕ್ಕುಗಳ ಹೋರಾಟಗಾರ್ತಿ 'ಖಲಿದಾ ಜರ್ರಾರ್'. ಕೈಫಾ ಅಫೀಫೀ ನಿರ್ದೋಷಿ ಎಂಬುದಕ್ಕೆ ಪೂರಕ ದಾಖಲೆಗಳನ್ನು ಸಂಗ್ರಹಿಸಿ ನ್ಯಾಯಾಲಯದಲ್ಲಿ ವಾದಿಸಿ ಬಿಡುಗಡೆಗೊಳಿಸುತ್ತಾಳೆ. ಬಿಡುಗಡೆಗೊಂಡ ಬಳಿಕ ಮಾಧ್ಯಮದವರು ಕೇಳಿದ ಪ್ರಶ್ನೆಗಳು, ಅವರ ದೇಶಪ್ರೇಮದ ಹೋರಾಟ ಕೂಡ ಮಾಧ್ಯಮದವರಿಗೆ ಭಯೋತ್ಪಾದನೆಯ ರೀತಿ ಬಿಂಬಿಸುವಂತಿತ್ತು.

ಕೊನೆಯಲ್ಲಿ ಕೈಫಾ ಅಫೀಫೀಯ ಮಾತುಗಳು ''ಇದು ಯುದ್ಧಗಳ ಜಗತ್ತು. ನಗುವು ಎಲ್ಲರ ಭಾಷೆಯಾಗುವ ದಿನಕ್ಕಾಗಿ ನಾನು ಕಾಯುತ್ತಿದ್ದೇನೆ. ಈಗಾಗಲೇ ಮರುಭೂಮಿಯ ಮರಳಿನಲೆಗಳು ಆ ನಗುವಿನ ಭಾಷೆಯಲ್ಲಿ ಹಾಡುತ್ತಿವೆ; ಮರೀಚಿಕೆಗಳು ಕೂಡ. ಯಾಕೆಂದರೆ ಅವು ನಮ್ಮ ಸಂವೇದನೆಯ ಭಾಗವೇ ಆಗಿ ಹೋಗಿವೆ. ಶ್ರೇಷ್ಠ ಜನಾಂಗಗಳ ಹುಟ್ಟಿನ ಮೂಲಕವೇ ಗಂಟು ಹಾಕಲ್ಪಟ್ಟಿರುವ ಮನುಕುಲದ ಸಾವಿಗೆದುರಾಗಿ ನಾವು..... ಪ್ಯಾಲೆಸ್ತೀನ್ ಮರೀಚಿಕೆಗಳು ಹಾಡಿಯೇ ತೀರುತ್ತೇವೆ.....'' (ಪೋಸ್ಟ್ ಬಾಕ್ಸ್ ನಂ–9, ಪುಟ ಸಂಖ್ಯೆ–87) ಎಂಬ ಆಕೆಯ ಮಾತುಗಳೊಂದಿಗೆ ಈ ನಾಟಕ ಕೊನೆಗೊಳ್ಳುತ್ತದೆ.

ಮಧ್ಯಪ್ರಾಚ್ಯವು ಈ ಹಿಂದೆ ಜಗತ್ತಿನ ಪ್ರಮುಖ ಪ್ರಾಚೀನ ನಾಗರಿಕತೆಗಳ ನೆಲೆಯಾಗಿತ್ತು. ಜಗತ್ತಿನ ಪ್ರಮುಖ ಧರ್ಮಗಳಾದ ಕ್ರೈಸ್ತ, ಇಸ್ಲಾಂ, ಯಹೂದಿಯಂತಹ ಪ್ರಮುಖ ಧರ್ಮಗಳ ಉಗಮಕ್ಕೆ ಕಾರಣವಾದ ನೆಲ. ಇಂದು ಆ ಧರ್ಮಗಳು ಜಗತ್ತಿನಾದ್ಯಂತ ವಿಸ್ತರಿಸಿ ನೂರಾರು ರಾಷ್ಟ್ರಗಳಲ್ಲಿ ಕೋಟ್ಯಂತರ ಜನ ಅನುಸರಿಸುತ್ತಿದ್ದಾರೆ. ಇಲ್ಲಿ ಹುಟ್ಟಿದ ಧರ್ಮಗಳಲ್ಲಿ ಸಾಕಷ್ಟು ಸಾಮ್ಯತೆ ಇದೆ. ಈ ಮೂರೂ ಧರ್ಮಗಳು ''ಅಬ್ರಹಮೀಯ ಧರ್ಮ''ಗಳೆಂದು ಕರೆಸಿಕೊಳ್ಳುತ್ತವೆ. ಹಾಗೂ ಈ ಧರ್ಮಗಳು ಸಹ ಏಕದೇವತಾರಾಧನೆ ಆಚರಿಸುವ ಧರ್ಮಗಳಾಗಿವೆ. ಈಗಿರುವಾಗ ಪರಸ್ಪರ ಸಾಮರಸ್ಯದಿಂದ, ಗೌರವಯುತವಾಗಿ ತಮ್ಮ ತಮ್ಮ ದೇಶದ ಸರ್ವತೋಮುಖ ಅಭಿವೃದ್ಧಿಯತ್ತ ಗಮನಹರಿಸುವ ಬದಲು, ಪರಸ್ಪರ ಹೊಡೆದಾಡುತ್ತಾ ಅಮಾಯಕ ಜನರ ಸಾವು ನೋವುಗಳಿಗೆ ಕಾರಣವಾಗುತ್ತಿದ್ದಾರೆ. ವಿಪರ್ಯಾಸವೇನೆಂದರೆ, ಕೆಲವು ಪಾಶ್ಚಿಮಾತ್ಯ ಶ್ರೀಮಂತ ರಾಷ್ಟ್ರಗಳು ತಮ್ಮ ಹಿತಾಸಕ್ತಿಗಳ ಈಡೇರಿಕೆಗಾಗಿ ಮಧ್ಯಪ್ರಾಚ್ಯದಲ್ಲಿ ಸದಾ ಸಂಘರ್ಷ ಜೀವಂತವಾಗಿರಲು ಬಯಸುತ್ತವೆ.

ಇಂತಹ ಸಂದರ್ಭದಲ್ಲಿ ರಾಷ್ಟ್ರಕವಿ 'ಕುವೆಂಪು'ರವರ ''ವಿಶ್ವಮಾನವ ಸಂದೇಶ''ದ ಸಾಲುಗಳು ನೆನಪಿಗೆ ಬರುತ್ತವೆ. ಹುಟ್ಟುವ ಪ್ರತಿ ಮಗುವೂ ವಿಶ್ವಮಾನವನಾಗಿರುತ್ತಾನೆ. ಆದರೆ ಆತ ಬೆಳೆಯುತ್ತಾ ಜಾತಿ, ಮತ, ಭಾಷೆ, ಧರ್ಮ

ಮುಂತಾದವುಗಳು ಅವನನ್ನು ಸಂಕುಚಿತ ಮನೋಭಾವದೊಂದಿಗೆ ಅಲ್ಪಮಾನವನನ್ನಾಗಿ ಈ ಸಮಾಜವು ರೂಪಿಸುತ್ತದೆ. ನಾವೆಲ್ಲಾ ಸೇರಿ ನಮ್ಮ ನಡುವಿನ ಈ ಎಲ್ಲಾ ಮಿತಿಗಳನ್ನು ಮೀರಿ ಮನುಷ್ಯತ್ವದ ನೆಲೆಯಲ್ಲಿ ಸಮಾಜವನ್ನು ರೂಪಿಸಬೇಕಾಗಿದೆ.

ಪರಾಮರ್ಶನ ಗ್ರಂಥಗಳು:

1. ಲಕ್ಷ್ಮೀಪತಿ ಕೋಲಾರ, (2016), ಪೋಸ್ಟ್ ಬಾಕ್ಸ್ ನಂ–9, ಮಾಲೂರು: ಶಾಹು ಪ್ರಕಾಶನ.
2. ರಹಮತ್ ತರೀಕೆರೆ, (2017), ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು: ಅಭಿನವ ಪ್ರಕಾಶನ.
3. ಹಂಪಾ ನಾಗರಾಜಯ್ಯ, (2023), ದ್ರಾವಿಡ ಭಾಷಾ ವಿಜ್ಞಾನ, ಮೈಸೂರು: ಡಿ.ವಿ.ಕೆ. ಮೂರ್ತಿ ಪ್ರಕಾಶನ.
4. ರಾಮಚಂದ್ರನ್ ಸಿ. ಎನ್., (2019), ಸಾಹಿತ್ಯ ವಿಮರ್ಶೆ, ಬೆಂಗಳೂರು: ಅಂಕಿತ ಪ್ರಕಾಶನ.
5. ರಾಮಚಂದ್ರನ್ ಸಿ. ಎನ್., (2016), ವಸಾಹತೋತ್ತರ ಚಿಂತನೆ, ಬೆಂಗಳೂರು: ಅಂಕಿತ ಪ್ರಕಾಶನ.